ಸಿ.ಮಿಸ್ ಃ 268/2014 ಪಿ. ಡಬ್ಲ್ಯೂ-1

ಸಾಕ್ಷಿಯನ್ನು ದಿಃ 05.12.2019 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲವರಿಂದಃ**

ನನ್ನ ಮಗಳ ಮದುವೆಗಾಗಿ ಬಟ್ಟೆಗಳನ್ನು ಖರೀದಿ ಮಾಡಿದ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 17 ಎಂದು ಗುರತಿಸಲಸಾಯಿತು. ಎಸ್ ಆರ್ ಜ್ಯುವೆಲರ್ಸ ಅಂಗಡಿಯಲ್ಲಿ, ನನ್ನ ಮಗಳ ಮದುವೆಗಾಗಿ ಕಿವಿಯ ಒಲೆ ಮತ್ತು ಮಾಟಿ ಖರೀದಿ ಮಾಡಿರುವ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 18 ಎಂದು ಗುರುತಿಸಲಾಯಿತು. ನನ್ನ ಮಗಳ ಮದುವೆ ನಡೆಸಿದ ಚೌಲ್ಟ್ರೀಯ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 19 ಎಂದು ಗುರತಿಸಲಾಯಿತು. ಮತ್ತು ಮದುವೆಯ ಇತರೆ ಖರ್ಚುಗಳನ್ನು ತೋರಿಸುವ 4 ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 20 ಎಂದು ಗುರತಿಸಲಾಯಿತು.

ನನ್ನ ಮಗಳ ಮದುವೆಗೆ 5 ಲಕ್ಷ ಖರ್ಚು ಆಗಿತ್ತು. ನನ್ನ ತಂದೆಗೆ ಎದುರುದಾರರು ಮದುವೆಗಾಗಿ ಒಂದುವರೆ ಲಕ್ಷ ಕೊಟ್ಟಿದ್ದಾರೆ. ಬಾಕಿ ಎಲ್ಲಾ ಖರ್ಚುಗಳನ್ನು ನಾನು ಸಾಲ ಮಾಡಿ ಮಾಡಿರುತ್ತೇನೆ. ನಾನು ತೀರಿಸಬೇಕಾದ ಸಾಲ ಎರಡುವರೆ ಲಕ್ಷ ಇರುತ್ತದೆ. ನಾನು ಇವಾಗ ಮೈಸೂರಿನ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ತಿಂಗಳ ಬಾಡಿಗೆ 4 ಸಾವಿರ ರೂ.ಗಳನ್ನು ನೀಡುತಿದ್ದೇನೆ. ನನಗೆ ಮತ್ತು ನನ್ನ ಮಗನಿಗೆ ತಿಂಗಳಿಗೆ 12 ರಿಂದ 14 ಸಾವಿರ ರೂ ಖರ್ಚುಗಳ ಆಗುತ್ತದೆ. ನನಗೆ ನನ್ನ ಪರವಾಗಿ ವಾಸದ ಆದೇಶ ಮತ್ತು ಜೀವನಾಂಶ ಮತ್ತು ಸಂರಕ್ಷಣೆ ಆದೇಶವನ್ನು ನನ್ನ ಪರವಾಗಿ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ತಿ.ನರಸೀಪುರ